**ದಿನಾಂಕ 26-11-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಜಿ.ಎಸ್.ಪಿ ವಕೀಲರಿಂದ ಪ್ರತಿವಾದಿ-1 ರಿಂದ 4 ಪರವಾಗಿ**

4. ನನ್ನ ಮದುವೆ ಆಗಿ 22 ರಿಂದ 23 ವರ್ಷಗಳು ಆಗಿವೆ. ನೀವು ಮದುವೆ ಆದಾಗಿನಿಂದ ಗಂಡನ ಮನೆಯಲ್ಲಿ ವಾಸಿಸುತ್ತಿದ್ದೀರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೋಗಿ - ಬಂದು ಮಾಡುತ್ತೇನೆ ಎಂದು ಹೇಳುತ್ತಾರೆ. ನಿಮ್ಮ ತಂದೆ, ತಾಯಿ ಮತ್ತು ನಿಮ್ಮ ನಡುವೆ ನಿಮ್ಮ ಸಂಬಂಧ ಸರಿ ಇಲ್ಲ ಎಂದರೆ 4 ವರ್ಷದ ಹಿಂದೆ ಯಾವಾಗಲಾದರೂ ಒಮ್ಮೆ ಮಾತನಾಡುತ್ತಿದ್ದರು, ಈಗ 4 ವರ್ಷದಿಂದ ಮಾತನಾಡುತ್ತಿಲ್ಲ ಎಂದು ಹೇಳುತ್ತಾರೆ. ನೀವು ಮದುವೆ ಆಗಿ 23 ವರ್ಷಗಳು ಆಗಿದ್ದು, ನಿಮ್ಮ ಗಂಡನ ಮನೆಯಲ್ಲಿ ವಾಸವಿದಿದ್ದರಿಂದ ನೀವು ಅವಿಭಕ್ತ ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ಮದುವೆ ಆದಾಗಿನಿಂದ ನಿಮ್ಮ ಗಂಡನ ಮನೆಯ ಸದಸ್ಯರು ಮಾತ್ರ ಆಗಿದ್ದೀರಿ ಎಂದರೆ ಎರಡು ಮನೆ ಸದಸ್ಯಳು ಇದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ಸರ್ವೆ ನಂ.2/6 ಕ್ಷೇತ್ರ 11 ಗುಂಟೆ, ಸರ್ವೆ ನಂ.73/6 ಕ್ಷೇತ್ರ 5 ಎಕರೆ 7 ಗುಂಟೆ, ಸರ್ವೆ ನಂ.73/4 ಕ್ಷೇತ್ರ 27 ಗುಂಟೆ 8 ಅಣೆ ಆಸ್ತಿಗಳಿಗೆ ನಿಮ್ಮ ತಂದೆಯವರನ್ನು ಹೊರತುಪಡಿಸಿ ಬೇರೆ ಯಾರಿಗೂ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೊರತುಪಡಿಸಿ, ವಾದಿಯಾದ ನಿಮಗೆ ಅಥವಾ ಉಳಿದ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ಇದ್ದ ಸರ್ವೆ ನಂ.73/1, 73/2 ಈಗ 73/4 ಮತ್ತು 73/6 ರ ಆಸ್ತಿಗಳು ಆಗಿವೆ ಎಂದರೆ ಪ್ರತಿವಾದಿಗಳು ಮಾಡಿಕೊಂಡಿದ್ದಾರೆ ನನ್ನ ಒಪ್ಪಿಗೆ ಪಡೆದುಕೊಂಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.2/6 ಕ್ಷೇತ್ರ 11 ಗುಂಟೆ, ಸರ್ವೆ ನಂ.73/6 ಕ್ಷೇತ್ರ 5 ಎಕರೆ 7 ಗುಂಟೆ, ಸರ್ವೆ ನಂ.73/4 ಕ್ಷೇತ್ರ 27 ಗುಂಟೆ 8 ಅಣೆ ಆಸ್ತಿಗಳು ಕೇವಲ 1 ನೇ ಪ್ರತಿವಾದಿಯ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿದ್ದಾರೆ ಎಂದರೆ ವಕೀಲರ ಕಡೆಯಿಂದ ನಾನೇ ಬರೆಸಿದ್ದೇನೆ ಎಂದು ಹೇಳುತ್ತಾರೆ. ದಾವೆ ಸಲ್ಲಿಸಲು ಮಾಹಿತಿ ಯಾರು ನೀಡಿದರು ಎಂದು ನಾನೇ ನೀಡಿದ್ದೇನೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಸುಳ್ಳು ಎಂದರೆ ಸರಿಯಲ್ಲ.

6. ನಿಮ್ಮ ತಾಯಿ ಹೆಸರಿನಲ್ಲಿ ಇದ್ದ ಆಸ್ತಿಗಳು ಅವರ ಸ್ವಂತ ಆಸ್ತಿಗಳಾಗಿದ್ದು, ಅವುಗಳಲ್ಲಿ ನಿಮ್ಮ ತಾಯಿಯಾದ 2 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮನೆ ಆಸ್ತಿಗಳು ನಿಮ್ಮ ತಂದೆಯ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಜಮೀನುಗಳ ಸ್ವಾಧೀನದಲ್ಲಿ ಕೇವಲ 1 ನೇ ಪ್ರತಿವಾದಿ ಇದ್ದಾರೆ ಎಂದರೆ ನಾವು ಇದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯ ದಸ್ತು ಮಾಡಿಕೊಟ್ಟ ಆಸ್ತಿಗಳು ಬರೆದುಕೊಟ್ಟವರ ಸ್ವಂತ ಆಸ್ತಿಗಳು ಆದ ಕಾರಣ ಅವು ನಿಮಗೆಲ್ಲರಿಗೂ ಬಂಧನಕಾರಕ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯವರು ದಾವಾ ದಾಖಲಾತಿಗಳಲ್ಲಿ ತಮ್ಮ ಹೆಸರು ಇದಿದ್ದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದು ಅದರಲ್ಲಿ ನಿಮಗೂ ಸಹ ಪಾಲು ಇದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಹಿಸ್ಸೆ ಬೇಕೆಂದು ಪ್ರತಿವಾದಿಗಳಿಗೆ ಕೇಳಿದಿರಿ ಎಂದು ಅವರು ಕೊಡಲು ನಿರಾಕರಿಸಿದರು ಎಂದು ನಿಮಗೆ ದಾವಾ ಅಸ್ತಿಗಳಲ್ಲಿ ಹಕ್ಕು ಇಲ್ಲದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸ್ವಾಧೀನದಲ್ಲಿ ಅವು ಯಾರ ಹೆಸರಿನಲ್ಲಿ ಇವೆಯೋ ಅವರೇ ಇದ್ದು, ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ